# ST. NORBERT SCHOOL

CBSE Affiliation No: 831041

Chowhalli, Kollegala Main Road, T. Narasipura - 571124, Mysore District

**"ಎಂತಾ ಚೆಂದ ನಿನ್ನ ನೋಟ ಕರಾವಳಿಯಲಿ**
**ಜೀವ ತೀರ್ಥ ನದಿಗಳ ಅಲಂಕಾರದಲಿ**
**ಸೌಹಾರ್ದತೆ ಮೆರೆದಿಹುದು ಮಾಣಿಕ್ಯ ಧಾರೆಯಲಿ**
**ಜ್ಞಾನಪೀಠದ ರತ್ನ ನಿನ್ನ ಮುಕುಟದಲಿ**
**ಮನೋಹರ ದಿವ್ಯ ಚೇತನದ ನಾಡೇ**
**ನಮಿಸುವೆ ಸಿರಿ ದೇವಿ ಕನ್ನಡದ ತಾಯೇ_.."**

ಎಲ್ಲರಿಗೂ ಸಂತ ನೋರ್ಬರ್ಟ್ ಶಾಲೆಯ ಕಡೆಯಿಂದ "**೬೭ ನೇ ಕನ್ನಡ ರಾಜ್ಯೋತ್ಸವ**"ದ ಶುಭಾಶಯಗಳು

ನವೆಂಬರ್ ತಿಂಗಳು ಬಂತು ಎಂದರೆ ಎಲ್ಲರ ಮನದಲ್ಲೂ, ನುಡಿಯಲ್ಲೂ ಕನ್ನಡ ಉತ್ಸವದ ಸಂಭ್ರಮಾಚರಣೆಯ ಮಾತುಕತೆ ಆರಂಭವಾಗುತ್ತದೆ, ಅದೇ ರೀತಿಯಲ್ಲಿ ನಮ್ಮ ಶಾಲೆಯಲ್ಲಿ ಸಂಭ್ರಮದಿಂದ ೬೭ ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಕನ್ನಡ ಉತ್ಸವದ ಸಂಭ್ರಮಾಚರಣೆಯ ಅಧ್ಯಕ್ಷತೆಯನ್ನು ನಮ್ಮ ಶಾಲೆಯ ಪ್ರಾಂಶುಪಾಲರಾದ ಸಿಸ್ಟರ್ ಸುಮಿ ರೋಸರವರು ವಹಿಸಿಕೊಂಡಿದ್ದರು ಹಾಗೂ ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಮು. ನಾ ರಮೇಶ್ ರವರು ಆಗಮಿಸಿದ್ದರು, ನಮ್ಮ ಶಾಲೆಯ ಉಪ ಪ್ರಾಂಶುಪಾಲರಾದ ಶ್ರೀಮತಿ ಶೀನಾ ಕೆ ಗುರ್ನಾನಿ, ಶಾಲಾ ಸಂಯೋಜಕರಾದ ಫಾದರ್ ರಾಜೇಶ್ ಮ್ಯಾಥ್ಯೂ ರವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಉತ್ಸವಕ್ಕೆ ಮತ್ತಷ್ಟು ಮೆರುಗು ನೀಡಿದರು. ಈ ಹಬ್ಬದ ಮುನ್ನುಡಿಯನ್ನು ವಿದ್ಯಾರ್ಥಿಗಳು ಪ್ರಾರ್ಥನಾ ನೃತ್ಯದ ಮೂಲಕ ಜ್ಞಾನದ ಜ್ಯೋತಿಯನ್ನು ಬೆಳಗಿಸುವುದರೊಂದಿಗೆ ಪ್ರಾರಂಭಿಸಲಾಯಿತು. ನಮ್ಮ ಶಾಲೆಯ ಶಿಕ್ಷಕಿಯಾದ ಬಸವರಾಜೇಶ್ವರಿ. ಬಿ ರವರು ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರನ್ನು ಸ್ವಾಗತಿಸಿದರು. ಕನ್ನಡ ನಾಡಿನ ಹಿನ್ನೆಲೆಯನ್ನು ತುಂಬ ಸ್ಫುಟವಾಗಿ ಅರ್ಪಿತಾ ರವರು ತಿಳಿಸಿಕೊಟ್ಟರು.

ಕಾರ್ಯಕ್ರಮ ಎಂದಾಕ್ಷಣ ನಮಗೆ ನೆನಪಾಗುವುದು ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಅದರ ಹಿನ್ನೆಲೆಯಲ್ಲಿ ಏರ್ಪಡಿಸಲಾಗುವ ಸ್ಪರ್ಧೆಗಳು ಅದೇ ರೀತಿಯಲ್ಲಿ ನಮ್ಮ ಶಾಲೆಯಲ್ಲಿಯೂ ಜಾನಪದ ಗೀತೆ, ಜಾನಪದ ನೃತ್ಯ, ಕಿರುನಾಟಕ, ವೇಷ ಭೂಷಣ ಸ್ಪರ್ಧೆ ಹೀಗೆ ಮುಂತಾದ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು ಮತ್ತು ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು ಹಾಗೂ ಕನ್ನಡ ಹಬ್ಬದ ಮೆರುಗನ್ನು ಹೆಚ್ಚಿಸಲು ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮು. ನಾ ರಮೇಶ್ ರವರು ಕನ್ನಡ ನಾಡು ನುಡಿಯ ಬಗ್ಗೆ ಎಲ್ಲರಿಗೂ ತಿಳಿಸಿಕೊಟ್ಟರು. ನಮ್ಮ ಶಾಲೆಯ ಪ್ರಾಂಶುಪಾಲರಾದ ಸಿಸ್ಟರ್ ಸುಮಿ ರೋಸ ರವರು ಸ್ಫುಟವಾಗಿ ಅಧ್ಯಕ್ಷತಾ ಭಾಷಣವನ್ನು ನೆರವೇರಿಸಿದರು.

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಆಗಮಿಸಿದಂತಹ ಎಲ್ಲಾ ಗಣ್ಯರಿಗೂ ದಾಕ್ಷಾಯಿಣಿ. ಎಸ್ ರವರು ವಂದನೆಗಳನ್ನು ಅರ್ಪಿಸಿದರು. ನಮ್ಮ ನೆಚ್ಚಿನ ವಿದ್ಯಾರ್ಥಿಗಳಾದ ಹರ್ಷಿತಾ ಎಸ್ ಮತ್ತು ಪ್ರಿಯಾ ರವರು ಕಾರ್ಯಕ್ರಮವನ್ನು ಅತಿ ವೈಭವಯುತವಾಗಿ ನೆಡೆಸಿಕೊಟ್ಟರು.

ವಂದನೆಗಳೊಂದಿಗೆ,
ಕನ್ನಡ ಸಮಿತಿ,

ರಜನಿ ಕೆ ಎಂ
ಮಹೇಶ್ ಕುಮಾರ್ ಹೆಚ್ ಪಿ
ಬಸವರಾಜೇಶ್ವರಿ ಬಿ
ದಾಕ್ಷಾಯಿಣಿ ಎಸ್
ಪವಿತ್ರ ಎಂ
ಜ್ಯೋತಿ ಎನ್










೬೭ನೇ ಕನ್ನಡ ರಾಜ್ಯೋತ್ಸವ